RNU AIR DHARWAD

MARCH 28, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- ಬೀದರ್ ಜಿಲ್ಲೆಯ ಕೃಷಿಕರಿಗಾಗಿ, ರಾಷ್ಟ್ರೀಯ ಪಿಂಚಣಿ ಯೋಜನೆ, ಪ್ರಾಯೋಗಿಕ ಅನುಷ್ಠಾನ.
- ಮಂಗಳೂರು ವಿಶ್ವವಿದ್ಯಾಲಯದ, 44ನೇ ಘಟಿಕೋತ್ಸವ; ಹರೇಕಳ ಹಾಜಬ್ಬ ಸೇರಿ, ಮೂವರು ಸಾಧಕರಿಗೆ, ಇಂದು, ಗೌರವ ಡಾಕ್ಟರೇಟ್, ಪ್ರದಾನ.
- ಮಂಡ್ಯ ಜಿಲ್ಲೆ, ಮೇಲುಕೋಟೆಯಲ್ಲಿ, ಇಂದು ವೈರಮುಡಿ ಬ್ರಹ್ಮೋತ್ಸವ, ಸಂಭ್ರಮ.
- 19ನೇ ಆವೃತ್ತಿಯ, ಐ.ಪಿ.ಎಲ್. ಕ್ರಿಕೆಟ್ ಸರಣಿ; ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇಂದು ಉದ್ಘಾಟನಾ ಪಂದ್ಯ.
- ನಾಳೆ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರ, ಮನ್ ಕಿ ಬಾತ್.

<><><>

**ಈಗ ವಾರ್ತೆಗಳ ವಿವರ**

<><><>

ರಾಷ್ಟ್ರೀಯ ಪಿಂಚಣಿ ಯೋಜನೆ – ಎನ್.ಪಿ.ಎಸ್, ಕೃಷಿಕರಿಗೆ ಜೀವನದ ಸಂಧ್ಯಾಕಾಲದಲ್ಲಿ, ಆರ್ಥಿಕ ಭದ್ರತೆ ಒದಗಿಸುವ, ಕೇಂದ್ರ ಸರ್ಕಾರದ ಮಹತ್ವದ ಯೋಜನೆ. ಬೀದರ ಜಿಲ್ಲೆಯಲ್ಲಿ, 'ಬೀಜ ಎನ್.ಪಿ.ಎಸ್.ದ್ದು; ಬೆಳೆ ಪಿಂಚಣಿಯದು' ಎಂಬ ಶೀರ್ಷಿಕೆ ಅಡಿ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಿರೀಶ ಬದೋಲೆ, ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದರು. ಕೃಷಿ ಇಲಾಖೆ, ಬೀದರ ವಿಭಾಗದ ಜಂಟಿ ನಿರ್ದೇಶಕಿ ದೇವಿಕಾ, ಪ್ರದೇಶ ಸಮಾಚಾರಕ್ಕಾಗಿ, ರಾಷ್ಟ್ರೀಯ ಪಿಂಚಣಿ ಯೋಜನೆ ಕುರಿತು, ಮಾಹಿತಿ ನೀಡಿದ್ದಾರೆ.

<><><>

ದೇವಿಕಾ ಧ್ವನಿ – 26 ಸೆಕೆಂದುಗಳು

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ವಿಶೇಷವಾಗಿ ಬೆಳೆಯಲಾಗುತ್ತಿರುವ, ಭಗವಾ ದಾಳಿಂಬೆ, ತಲಾ 500 ರಿಂದ 700 ಗ್ರಾಮ್ ವರೆಗೆ, ತೂಗಬಲ್ಲದು. ಕಡು ಕೆಂಪು ಬಣ್ಣದ ಭಗವಾ ದಾಳಿಂಬೆಗೆ, ಭೌಗೋಳಿಕ ಮಾನ್ಯತೆ ಪಡೆಯಲು, ಯೋಜಿಸಲಾಗಿದೆ. ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳಿಗೆ, ಭಗವಾ ದಾಳಿಂಬೆ ಪ್ರಸ್ತುತ ರಫ್ತಾಗುತ್ತಿದೆ. ಬಾಗಲಕೋಟೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲೂ,

ಹಲವು ಕಡೆ, ಈ ತಳಿಯ ದಾಳಿಂಬೆ ಬೆಳೆಯಲಾಗುತ್ತಿದೆ. ಚಿಂತಾಮಣಿ ಕೃಷಿ ವಿಜ್ಞಾನ ಕೇಂದ್ರದ, ವಿಜ್ಞಾನಿ ಆರ್. ಪ್ರವೀಣಕುಮಾರ, ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ,

<><><>

ಆರ್.ಪ್ರವೀಣಕುಮಾರ ಧ್ವನಿ – 30 ಸೆಕೆಂದುಗಳು

<><><>

ದಾವಣಗೆರೆಯ ದಕ್ಷಿಣ ವಿಧಾನಸಭೆ ಉಪಚುನಾವಣೆ ಪ್ರಯುಕ್ತ, ನಾಗನೂರು ಗ್ರಾಮದಲ್ಲಿ, ಬಿ.ಜೆ.ಪಿ. ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಪರವಾಗಿ, ಹಾವೇರಿ – ಗದಗ ಲೋಕಸಭಾ ಕ್ಷೇತ್ರದ ಸಂಸದ, ಬಸವರಾಜ ಬೊಮ್ಮಾಯಿ ಕ್ಷೇತ್ರದ ಜನತೆಯಲ್ಲಿ ಮತಯಾಚಿಸಿದರು. ಬೆಂಗಳೂರಿನ, ಕಾಂಗ್ರೆಸ್ ಭವನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ, ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ, ಸಾದಿಕ್ ಪೈಲ್ವಾನ್ ನಾಮಪತ್ರ ಹಿಂಪಡೆದಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕಡೆಗಳಲ್ಲಿ, ಕಾಂಗ್ರೆಸ್ ಪಕ್ಷ ಜಯ ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

<><><>

ಮಂಗಳೂರು ವಿಶ್ವವಿದ್ಯಾಲಯದ, 44ನೇ ಘಟಿಕೋತ್ಸವ, ಇಂದು ಬೆಳಗ್ಗೆ 11 ಗಂಟೆಗೆ, ಮಂಗಳಾ ಸಭಾಂಗಣದಲ್ಲಿ ಜರುಗಲಿದೆ. ರಾಜ್ಯಪಾಲ ಥಾವರಚಂದ ಗೆಹ್ಲೋಟ ಪಾಲ್ಗೊಂಡು, ಶಿಕ್ಷಣ ಪ್ರೇಮಿ ಹರೇಕಳ ಹಾಜಬ್ಬ, ದೈವ ನರ್ತಕ ರವೀಶ ಪಡುಮಲೆ ಅವರಿಗೆ ಗೌರವ ಡಾಕ್ಟರೆಟ್ ನೀಡಿ, ಗೌರವಿಸಲಿದ್ದಾರೆ. ಯಕ್ಷಗಾನದ ಹಿರಿಯ ಕಲಾವಿದ, ಸೂರಿಕುಮೇರು ಗೋವಿಂದ ಭಟ್ ಅವರಿಗೆ ಮರಣೋತ್ತರವಾಗಿ ಗೌರವ ಡಾಕ್ಟರೆಟ್ ಪ್ರದಾನಿಸಲಾಗುತ್ತಿದೆ ಎಂದು, ಉಪ ಕುಲಪತಿ ಪಿ.ಎಲ್.ಧರ್ಮ ತಿಳಿಸಿದ್ದಾರೆ. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ, 69 ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಹಾಗೂ 162 ಜನರಿಗೆ, ಪಿ.ಎಚ್.ಡಿ ಪದವಿಗಳನ್ನು, ಕುಲಾಧಿಪತಿ ಪ್ರದಾನಿಸಲಿದ್ದಾರೆ.

<><><>

ಮಂಡ್ಯ ಜಿಲ್ಲೆ, ಮೇಲುಕೋಟೆಯ ಶ್ರೀ ಚೆಲುವನಾರಾಯಣಸ್ವಾಮಿ ವೈರಮುಡಿ ಬ್ರಹ್ಮೋತ್ಸವ, ಇಂದು ಶ್ರದ್ಧಾ ಭಕ್ತಿಯಿಂದ ಜರುಗಲಿದೆ. ಬೆಳಗ್ಗೆ 7 ಗಂಟೆಗೆ, ಜಿಲ್ಲಾ ಖಜಾನೆಯಿಂದ, ವೈರಮುಡಿ ಸಾಮಗ್ರಿಗಳನ್ನು ವಿಶ್ವಸ್ಥರು ಪಡೆದಿದ್ದು, ಶ್ರೀ ಲಕ್ಷ್ಮೀ ಜನಾರ್ದನ ಸ್ವಾಮಿ ದೇವಾಲಯದಿಂದ ಮೆರವಣಿಗೆ ಆರಂಭವಾಗಲಿದೆ. ಪೊಲೀಸ್ ಬಿಗಿ ಭದ್ರತೆಯಲ್ಲಿ, ಇಂಡವಾಳು, ಬಾಬುರಾಯನ ಕೊಪ್ಪಲು, ಶ್ರೀರಂಗಪಟ್ಟಣ ಮೂಲಕ, ನ್ಯಾಮನಹಳ್ಳಿ, ಜಕ್ಕನಹಳ್ಳಿ, ಕದಲಗೆರೆ ಮಾರ್ಗವಾಗಿ ಮೇಲುಕೋಟೆಗೆ ತರಲಾಗುತ್ತಿದೆ. ಮುಡಿ ಪೆಟ್ಟಿಗೆಗಳನ್ನು ಎಲ್ಲ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ತೆರೆದು, ರಾತ್ರಿ 8 ಗಂಟೆಗೆ, ವಿಧಿವತ್ ವೈರಮುಡಿ ಬ್ರಹ್ಮೋತ್ಸವ ಪ್ರಾರಂಭವಾಗುವುದು ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್ ಕಾರ್ಯಕ್ರಮದ, 132ನೇ ಆವೃತ್ತಿ, ನಾಳೆ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಎಲ್ಲ ಕೇಂದ್ರಗಳು, ದೂರದರ್ಶನ, ಪಿ.ಎಂ.ಓ ಯುಟ್ಯೂಬ್ ವಾಹಿನಿ, ನ್ಯೂಸ್ ಆನ್ ಏರ್ ಆಪ್ ನಲ್ಲಿ, ಏಕಕಾಲದಲ್ಲಿ ಪ್ರಸಾರವಾಗಲಿದೆ. ಬಳಿಕ, ಹಿಂದಿ ಭಾಷಣದ ಕನ್ನಡ ಅವತರಣಿಕೆ ಬಿತ್ತರಗೊಳ್ಳುವುದು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನದ ಮಾತಿನ ಮೂಲಕ, ತಮ್ಮ ಮನದಾಳದ ಅನಿಸಿಕೆಗಳನ್ನು, ಜನತೆಯ ಅಭಿಪ್ರಾಯಗಳನ್ನಾಧರಿಸಿ, ಹಂಚಿಕೊಳ್ಳಲಿದ್ದಾರೆ. ರಾಜ್ಯಾದ್ಯಂತ ಹಲವೆಡೆ, ನೇರ ಪ್ರಸಾರ ವೀಕ್ಷಿಸಲು ಸಹ, ವ್ಯವಸ್ಥೆಗೊಳಿಸಲಾಗಿದೆ.

<><><>

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಐ.ಪಿ.ಎಲ್ – 2026ರ, 19ನೇ ಆವೃತ್ತಿಯ, ಉದ್ಘಾಟನಾ ಪಂದ್ಯ, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇಂದು ಸಂಜೆ 7:30ಕ್ಕೆ ಆಯೋಜಿತವಾಗಿದೆ. ರಾಯಲ್ ಚಾಲೆಂಜರ್ಸ್, ಬೆಂಗಳೂರು ಹಾಗೂ ಸನ್ ರೈಸರ್ಸ್ ಹೈದರಾಬಾದ ಕ್ರಿಕೆಟ್ ತಂಡಗಳ ಮಧ್ಯೆ ಉದ್ಘಾಟನಾ ಪಂದ್ಯ ನಡೆಯಲಿದೆ. ಉದ್ಘಾಟನಾ ಪಂದ್ಯದ ವೀಕ್ಷಣೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು, ರಾಜ್ಯ ಕ್ರಿಕೆಟ್ ಮಂಡಳಿ ಅಧ್ಯಕ್ಷ ಹಾಗೂ ಖ್ಯಾತ ಕ್ರಿಕೆಟಿಗ, ವೆಂಕಟೇಶ ಪ್ರಸಾದ, ಬೆಂಗಳೂರಿನಲ್ಲಿ ಭೇಟಿ ಮಾಡಿ, ಆಹ್ವಾನಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಬೆಂಗಳೂರಿನಲ್ಲಿ ಮಾತನಾಡಿ, ಕೆ.ಎಸ್.ಸಿ.ಎ ಶಾಸಕರಿಗೆ ತಲಾ ಎರಡು ಐಪಿ.ಎಲ್ ಟಿಕೆಟ್ ನೀಡಲು ಒಪ್ಪಿದೆ ಎಂದು ತಿಳಿಸಿದ್ದಾರೆ. ಭದ್ರತಾ ವ್ಯವಸ್ಥೆಗಳ ಕುರಿತು, ಮಾಹಿತಿ ನೀಡಿದ, ಬೆಂಗಳೂರು ನಗರ ಪೊಲೀಸ್ ಆಯುಕ್ತ, ಸೀಮಂತಕುಮಾರ ಸಿಂಗ್, ಚಿನ್ನಸ್ವಾಮಿ ಕ್ರೀಡಾಂಗಣದ, ಪ್ರವೇಶ ಹಾಗೂ ನಿರ್ಗಮನ ದ್ವಾರಗಳ ಸಂಖ್ಯೆಯನ್ನು, 22 ರಿಂದ 45ಕ್ಕೆ ಹೆಚ್ಚಿಸಲಾಗಿದೆ. ಪ್ರೇಕ್ಷಕರು ಟಿಕೆಟ್‌ನಲ್ಲಿ ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕ್ರೀಡಾಂಗಣದ ಸುತ್ತಮುತ್ತ, ವಾಹನ ನಿಲುಗಡೆ ನಿಷೇಧಿಸಿದ್ದು, ಬೇರೆಡೆ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿದೆ, ಎಂದರು.

<><><>

ಹಿರಿಯ ಮುತ್ಸದ್ದಿ, ದಿವಂಗತ ರಾಮಕೃ ್ಣ ಹೆಗಡೆ ಅವರ ಧರ್ಮಪತ್ನಿ, ಶಕುಂತಲಾ ಹೆಗಡೆ ಅವರ ಆರೋಗ್ಯವನ್ನು, ವಿಧಾನ ಪರಿ ‘ತ್ ಸಭಾಪತಿ ಬಸವರಾಜ ಹೊರಟ್ಟಿ, ಬೆಂಗಳೂರಿನ ಸದಾಶಿವನಗರದ ಅವರ ನಿವಾಸಕ್ಕೆ ಭೇಟಿ ನೀಡಿ, ವಿಚಾರಿಸಿದರು. ಶೀಘ್ರ ಗುಣಮುಖರಾಗಿ ಎಂದು, ಹಾರೈಸಿದರು. ರಾಮಕೃ ್ಣ ಹೆಗಡೆ ಅವರ ಕೊಡುಗೆಗಳನ್ನು ಸ್ಮರಿಸಿದ, ಸಭಾಪತಿಗಳು, ಮೌಲ್ಯಾಧಾರಿತ ರಾಜಕಾರಣಿ ಆಗಿದ್ದ ಹೆಗಡೆಯವರ ಬದುಕು ಹಾಗೂ ಸಾರ್ವಜನಿಕ ಸೇವೆ, ಇಂದಿಗೂ ಜನ ಮಾನಸದಲ್ಲಿ ಹಚ್ಚ ಹಸಿರಾಗಿದೆ ಎಂದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆಯ, 19 ಗ್ರಾಮ ಪಂಚಾಯಿತಿಗಳ, 23 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಮುಂಬರುವ ದಿನಗಳಲ್ಲಿ, ಇನ್ನೂ 66 ಗ್ರಾಮಗಳಲ್ಲಿ ಜನ ಹಾಗೂ ಜನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

ಜಿಲ್ಲಾಧಿಕಾರಿ ಜಿ.ಪ್ರಭು, ಜಿಲ್ಲಾಡಳಿತ ಭವನದಲ್ಲಿ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ ನಡೆಸಿ, ನಗರ ಪ್ರದೇಶದ, 14 ವಾರ್ಡ್‌ಗಳಿಗೆ, 9 ಖಾಸಗಿ ಟ್ಯಾಂಕರ್ ಹಾಗೂ 10 ಖಾಸಗಿ ಕೊಳವೆ ಬಾವಿಗಳ ಮೂಲಕ, ಕುಡಿಯುವ ನೀರು ಪೂರೈಸಲಾಗುತ್ತಿದೆ ಎಂದರು.

<><><>

ಕೊಡಗು ಜಿಲ್ಲೆ, ಕೂಡಿಗೆಯ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಡಯಟ್‌ನಲ್ಲಿ, “ನನ್ನ ವೃತ್ತಿ, ನನ್ನ ಆಯ್ಕೆ” ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ವೃತ್ತಿ ಮಾರ್ಗದರ್ಶನ ಮೇಳಕ್ಕೆ, ಜಿಲ್ಲಾ ಪಂಚಾಯಿತಿ ಸಿ.ಇ.ಒ. ಆನಂದ ಪ್ರಕಾಶ ಮೀನಾ ಚಾಲನೆ ನೀಡಿದರು.

<><><>

ವಿಜಯನಗರ ಜಿಲ್ಲೆಯ, ವಿವಿಧ ತಾಲೂಕುಗಳ ವ್ಯಾಪ್ತಿಯಲ್ಲಿ, ಪರಿಶಿ ್ಟ ಜಾತಿ ಮತ್ತು ಪರಿಶಿ ್ಟ ಪಂಗಡಗಳ ಸಮುದಾಯದ 15 ಜನ ಸಂತ್ರಸ್ತರಿಗೆ, ಒಟ್ಟು 26 ಲಕ್ಷದ 55 ಸಾವಿರ ರೂಪಾಯಿ ಪರಿಹಾರ ಒದಗಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ತಿಳಿಸಿದ್ದಾರೆ.

<><><>